Karnataka Board

Mid-Term Question Paper

2024-25

aglasem.com

ದ್ವಿತೀಯ ಪಿಯುಸಿ ಮಧ್ಯವಾರ್ಷಿಕ ಪರೀಕ್ಷೆ, ಅಕ್ಟೋಬರ್/ನವೆಂಬರ್ 2024

ವಿಷಯ : ಕನ್ನಡ (01)

ಸಮಯ : 3 ಗಂಟೆಗಳು | ಅಂಕಗಳು : 80

ಸೂಚನೆ :

"ಅ–ವಿಭಾಗ" ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

ಅ–ವಿಭಾಗ

I ಅ. ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. **10x1=10**

1. ಸೀತೆಯನ್ನು ರಾವಣ ಎಲ್ಲಿರಿಸಿದ್ದನು ?
   ಅ) ಅಶೋಕವನ ಆ) ಪ್ರಮದವನ ಇ) ಉದ್ಯಾನವನ ಈ) ಚೈತ್ರವನ

2. ಯಾವುದರಿಂದ ಪರಿಮಳವನ್ನು ಅರಿಯಬಹುದು ?
   ಅ) ಮರಗಳಿಂದ ಆ) ಹಣ್ಣುಗಳಿಂದ ಇ) ಪುಷ್ಪಗಳಿಂದ ಈ) ಕಾಂಡಗಳಿಂದ

3. ವಲ್ಲಭೆಯೆ ಬರವೇನು ಮುಖದಲ್ಲಿ
   ತಲ್ಲಣವೆ ತಲೆದೋರುತಿದೆ ತಳು
   ವಿಲ್ಲದು ಸುರಿಯಳೇಕೆ ಬಂದೆ ಲತಾಂಗಿ ಹೇಳೆಂದ– ಈ ಪದ್ಯಭಾಗದಲ್ಲಿ ಹೀಗೆಂದು ದ್ರೌಪದಿಯನ್ನು ಪ್ರಶ್ನಿಸಿದವರು ಯಾರು ?
   ಅ) ಭೀಮ ಆ) ಧರ್ಮರಾಯ ಇ) ಅರ್ಜುನ ಈ) ನಕುಲ

4. ಹಗೆಯನ್ನು ಏನೆಂದು ಉಪೇಕ್ಷಿಸಬಾರದೆಂದು ಸೋಮನಾಥನು ಹೇಳಿದ್ದಾನೆ ?
   ಅ) ವೀರನೆಂದು ಆ) ಶತ್ರುವೆಂದು ಇ) ಸ್ನೇಹಿತನೆಂದು ಈ) ಬಾಲಕನೆಂದು

5. ಬ್ಯಾಸಗಿ ದಿವಸಕ್ಕೆ ಯಾವ ಮರ ತಂಪು ?
   ಅ) ಬೇವಿನ ಮರ ಆ) ಮಾವಿನ ಮರ ಇ) ತೆಂಗಿನ ಮರ ಈ) ಆಲದ ಮರ

6. ನಾಗರೀಕತೆಯ ಉನ್ನತಿಯ ಆದರ್ಶದೊಡನೆ ಆರಂಭವಾಗುವ ಅಭಿವೃದ್ಧಿಯು ಏನಾಗುತ್ತದೆ ?
   ಅ) ದೂರದೃಷ್ಟಿ ಒಳನೋಟವಿರುವ ಅಭಿವೃದ್ಧಿಯಾಗುತ್ತದೆ. ಆ) ಮನುಕುಲದ ಪತನಕ್ಕೆ ಕಾರಣವಾಗುತ್ತದೆ.
   ಇ) ಮಾನವ ಸಾಮರ್ಥ್ಯಕ್ಕೆ ದಕ್ಕಿದ ವಿಜಯವಾಗಿದೆ. ಈ) ಸದೃಢ ಆರ್ಥಿಕತೆಗೆ ಸಹಕಾರಿಯಾಗಿದೆ.

7. ಅದೃಷ್ಟದ ಪ್ರಶ್ನೆ ಬಂದಾಗ ಲೇಖಕಿಗೆ ಯಾರು ನೆನಪಾಗುತ್ತಾರೆ ?
   ಅ) ಕಮಲಮ್ಮ ಆ) ಕೀರ್ತಿ ಇ) ಸೀತಾ ಈ) ಮುದ್ದೇಗೌಡರು

8. ದುರ್ಗಪ್ಪ ಏನನ್ನು ಕೇಳಿ ಪಡೆಯಲು ಬಂದಿದ್ದನು ?
   ಅ) ಕತ್ತಿ ಆ) ಪಿಕಾಸಿ ಇ) ಕೋವಿ ಈ) ಕೊಡಲಿ

9. ನಿರೂಪಕರ ಇಕಾಲಜಿಸ್ಟ್ ಗೆಳೆಯ ಯಾರು ?
   ಅ) ಪ್ರಕಾಶ ಆ) ದುರ್ಗಪ್ಪ ಇ) ಕೃಷ್ಣೇಗೌಡ ಈ) ಪುಟ್ಟಯ್ಯ

10. "ಏನ್ ಸ್ವಾಮಿ, ಸಾಯೋದಕ್ಕೆ ಹೆದರೋವ ನಾನು ಅಂತ ತಿಳುಕೊಂಡ್ರ ? ಲೈನ್‌ಮನ್ ಕೆಲಸಕ್ಕೆ ಸೇರಿದ ಮೇಲೆ ಪ್ರಾಣದ ಆಸೆ ಇಟ್ಕೊಂಡ್ರೆ ಆಗುತ್ತ ? ನಮ್ಮ ಡಿಪಾರ್ಟ್‌ಮೆಂಟಿನ ಲೈನ್‌ಮನ್‌ಗಳ್ಯಾರಾದ್ರೂ ಈ ವರೆಗೆ ಸರ್ವಿಸ್ ಮುಗಿಸಿ ರಿಟೈರಾಗಿರೋದನ್ನ ನೋಡಿದ್ದೀರಾ?" ——ಲೈನ್‌ಮನ್ ದುರ್ಗಪ್ಪನ ಮಾತುಗಳು ಆತನ ಕೆಲಸದ ಬಗ್ಗೆ ಏನನ್ನು ಸೂಚಿಸುತ್ತದೆ?
    ಅ) ಸುಲಭದ ಕೆಲಸ ಆ) ಕಷ್ಟಕರವಾದ ಕೆಲಸ ಇ) ಆಸೆಯ ಕೆಲಸ ಈ) ಅಪಾಯಕಾರಿ ಕೆಲಸ

ಆ. ಬಿಟ್ಟ ಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ : **5x1=5**

[ನಿಶಾಶರ್ಮ, ಸಿಂಹಬಾಲದ ಕೋತಿ, ಸಿದ್ಲಿಂಗಿ, ಬೌದ್ಧ ಧರ್ಮ, ಶಿವಸುಬ್ರಹ್ಮಣ್ಯ ಅಯ್ಯರ್, ಡಾ॥ ಸಿ. ಎನ್. ಆರ್. ರಾವ್)

11. ಬಸಲಿಂಗನ ಹೆಂಡತಿಯ ಹೆಸರು ——————
12. ಕೆಂಪು ಪಟ್ಟಿಗೆ ಸೇರಿದ ಪ್ರಾಣಿ ——————
13. ದುರಾಸೆಯ ಹುಡುಗನನ್ನು ನಿರಾಕರಿಸಿದವರು ——————
14. ನಮ್ಮ ದೇಶದಲ್ಲಿ ಖಿಲವಾಗಿ ಹೋದ ಧರ್ಮ ——————
15. ಕನ್ನಡ ಮೂಲಕ ಕಲಿತು ಶ್ರೇಷ್ಠ ವಿಜ್ಞಾನಿಯಾದವರು ——————

(ಪು.ತಿ.ನೋ)

schools.aglasem.com
aglasem.com

ಇ. ಹೊಂದಿಸಿ ಬರೆಯಿರಿ: **5x1=5**

16. ಅ. ನಾಗಚಂದ್ರ – 1. ರೂಪಕ ಸಾಮ್ರಾಜ್ಯದ ಚಕ್ರವರ್ತಿ 3
ಆ. ಬಸವಣ್ಣ – 2. ಕೂಡಲ ಸಂಗಮ ದೇವಾ 2
ಇ. ಕುಮಾರವ್ಯಾಸ – 3. ಪುರಂದರ ದಾಸರು 4
ಈ. ಜಾಲಿಯ ಮರದಂತೆ – 4. ಕದಡಿದ ಸಲಿಲಂ ತಿಳಿವಂದದೆ 1
ಉ. ಹಬ್ಬಲಿ ಅವರ ರಸಬಳ್ಳಿ – 5. ಸೋಮೇಶ್ವರ ಶತಕ 5
6. ಗರತಿಯ ಹಾಡು

ಆ–ವಿಭಾಗ

II **ಅ. ಯಾವುದಾದರೂ <u>ಮೂರು</u> ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** **3x2=6**

17. ಸೀತೆಯ ತಲ್ಲಣಕ್ಕೆ ಕಾರಣವೇನು ?
18. ಗುರುವಿನ ಲಕ್ಷಣಗಳಾವುವು ?
19. ಯಾರಿಗೆ ಷಡ್ರಸಾನ್ನವನಿಕ್ಕಿ ಉಪಯೋಗವಿಲ್ಲ ? ಏಕೆ ?
20. ಹಡೆದವ್ವನನ್ನು ಯಾವಾಗ ನೆನೆಯಬೇಕು ?

ಆ. ಯಾವುದಾದರೂ <u>ಎರಡು</u> ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. **2x2=4**

21. ಸಿದ್ಲಿಂಗಿ ಏಕೆ ರಾದ್ಧಾಂತ ಮಾಡಿದಳು ?
22. ಬ್ರಿಟಿಷರು ಬರುವ ಮೊದಲು ವಾಲ್‌ಪರೈ ಹೇಗಿತ್ತು ?
23. ತಾನು ಅದೃಷ್ಟವಂತೆಯೆಂದು ಲೇಖಕಿ ಭಾವಿಸಲು ಕಾರಣವೇನು ?
24. ಕರ್ನಾಟಕದಲ್ಲಿ ಕನ್ನಡಕ್ಕೆ ಯಾವ ಸ್ಥಾನವಿರಬೇಕೆಂದು ಹಾ.ಮಾ.ನಾ ಅಪೇಕ್ಷಿಸಿದ್ದಾರೆ ?

ಇ. ಯಾವುದಾದರೂ <u>ಮೂರು</u> ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. **3x2=6**

25. ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು ?
26. ಆನೆ ಸಾಕುವುದರ ಬಗ್ಗೆ ಜನರ ನಂಬಿಕೆ ಏನಾಗಿತ್ತು ?
27. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ನಂಬರ್ ಒನ್ ಎನಿಮಿಗಳು ಯಾರು ಯಾರು ?
28. ಜಬ್ಬಾರ್ ನಿರೂಪಕರಿಗೆ ಅಂಚೆ ವಿಲೇವಾರಿ ಬಗ್ಗೆ ಅಸಡ್ಡೆಯಿಂದ ಏನು ಹೇಳಿದ ?

ಈ–ವಿಭಾಗ

III **ಅ. ಯಾವುದಾದರೂ <u>ಎರಡು</u> ವಾಕ್ಯಗಳ ಸಂದರ್ಭ ಸೂಚಿಸಿ–ಸ್ವಾರಸ್ಯ ಬರೆಯಿರಿ.** **2x3=6**

29. ಪುಷ್ಪವಿಲ್ಲದೆ ಪರಿಮಳವನರಿಯಬಹುದೆ.
30. ಮೂಲಾಗ್ರ ಪರಿಯಂತ ಮುಳ್ಳು ಕೂಡಿಪ್ಪಂತೆ.
31. ಹಬ್ಬಲಿ ಅವರ ರಸಬಳ್ಳಿ

ಆ. ಯಾವುದಾದರೂ <u>ಒಂದು</u> ವಾಕ್ಯದ ಸಂದರ್ಭ ಸೂಚಿಸಿ–ಸ್ವಾರಸ್ಯ ಬರೆಯಿರಿ. **1x3=3**

32. ಹಾಡುವುದು ಅವುಗಳಿಗೆ ಅನಿವಾರ್ಯ; ಅವುಗಳ ಕರ್ಮ !
33. "ನೋಡು, ನಿನ್ನ ಎದುರು ಎರಡು ಆಯ್ಕೆಗಳಿವೆ"
34. ಒಂದೊಂದು ಭಾಷೆಯೂ ಒಂದೊಂದು ವರ.

ಇ. ಯಾವುದಾದರೂ <u>ಒಂದು</u> ವಾಕ್ಯದ ಸಂದರ್ಭ ಸೂಚಿಸಿ–ಸ್ವಾರಸ್ಯ ಬರೆಯಿರಿ. **1x3=3**

35. ಆನೆಗೂ ಮಾನ ಮರ್ಯಾದೆ ಇರುತ್ತೆ ತಿಳುಕೊ.
36. ವೆಪನ್ ಸರ್, ವೆಪನ್ ನಮಗೆ ಮುಖ್ಯ.

ಈ–ವಿಭಾಗ

IV **ಅ. ಯಾವುದಾದರೂ <u>ಎರಡು</u> ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **2x4=8**

37. ಪ್ರಮದವನದಲ್ಲಿ ರಾವಣ – ಸೀತೆಯರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ.
38. ಶಿವಪಥವನ್ನರಿಯದವನ ಭಕ್ತಿ ನಿರರ್ಥಕವೆಂಬುದನ್ನು ಬಸವಣ್ಣ ಯಾವ ಯಾವ ಉದಾಹರಣೆಗಳ ಮೂಲಕ ವಿವರಿಸಿದ್ದಾರೆ ?
39. ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ.

(ಪು.ತಿ.ನೋ)

schools.aglasem.com
aglasem.com

40. **ಈ ಕೆಳಗಿನ ಪದ್ಯಭಾಗವನ್ನು ಅರ್ಥೈಯಿಸಿಕೊಂಡು ಕೇಳಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ.**

ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ ।
ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತಂ ॥
ಕೆಲವಂ ಸಜ್ಜನ ಸಂಘದಿಂದಲರಿಯಲ್ ಸರ್ವಜ್ಞನಪ್ಪಂ ನರಂ ।
ಪಲವುಂ ಪಳ್ಳ ಸಮುದ್ರವೈ ಹರಹರಾ ಶ್ರೀಚೆನ್ನ ಸೋಮೇಶ್ವರಾ ॥

ಅ) ಪದ್ಯಭಾಗದಲ್ಲಿ ಶಾಸ್ತ್ರಂಗಳನ್ನು ಏನು ಮಾಡಬೇಕೆಂದು ಹೇಳಿದ್ದಾನೆ. **(1 ಅಂಕ)**

ಆ) ಈ ಪದ್ಯದ ಕವಿಯ ಅಂಕಿತ ಯಾವುದು ? **(1 ಅಂಕ)**

ಇ) ಮನುಷ್ಯ ಯಾವಾಗ ಸರ್ವಜ್ಞನಾಗುತ್ತಾನೆಂದು ಕವಿ ಹೇಳಿದ್ದಾನೆ, ಸಮರ್ಥಿಸಿ. **(2 ಅಂಕ)**

ಆ. ಯಾವುದಾದರೂ <u>ಒಂದು</u> ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ **1x4=4**

41. ಬಸಲಿಂಗ ಎದುರಿಸುತ್ತಿದ್ದ ಸಮಸ್ಯೆಗಳು ಯಾವುವು ?

42 ಸೀತಾ ಎಂಬ ಗೆಳತಿಯ ಗುಣ–ಸ್ವಭಾವವನ್ನು ಲೇಖಕಿ ಹೇಗೆ ಚಿತ್ರಿಸಿದ್ದಾರೆ ?

ಇ. ಯಾವುದಾದರೂ <u>ಒಂದು</u> ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ **1x4=4**

43. ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದ್ದೇಕೆ ?

44. ಅರಣ್ಯ ಇಲಾಖೆಯ ಶತ್ರುಗಳ ಕಾರ್ಯ ಭಾರವನ್ನು ನಾಗರಾಜ ವಿವರಿಸಿದ್ದು ಹೇಗೆ ?

ಉ–ವಿಭಾಗ (ಭಾಷಾಭ್ಯಾಸ)

V **ಅ. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ <u>ನಾಲ್ಕಕ್ಕೆ</u> ಸೂಚನೆಗೆ ಅನುಗುಣವಾಗಿ ಉತ್ತರಿಸಿ.** **4x2=8**

45. ಕೆಳಗಿನ ಎರಡು ಪದಗಳ ನಾನಾರ್ಥ ಪದಗಳನ್ನು ಬರೆಯಿರಿ.

ಕರ, ದೊರೆ, ಅರಿ

46. ಕೆಳಗಿನ ಎರಡು ಪದಗಳ ಗುಣವಾಚಕಗಳನ್ನು ಗುರುತಿಸಿ ಬರೆಯಿರಿ.

ವಕ್ತ್ರಪದ್ಮ, ರಸಬಳ್ಳಿ, ಕಿರುಹಾದಿ

47. ಕೆಳಗಿನ ಎರಡು ಪದಗಳ ವಿಭಕ್ತಿಗಳನ್ನು ಹೆಸರಿಸಿ.

ಮುಖದಲ್ಲಿ, ಕೀರ್ತಿಗೆ, ಮನೆಯಿಂದ

48. ಕೆಳಗಿನ ಎರಡು ಕ್ರಿಯಾಪದಗಳ ಕಾಲವನ್ನು ಬರೆಯಿರಿ.

ಆಗಮಿಸಿದ, ತಿನ್ನುತ್ತಾರೆ, ಹುಡುಕುವನು

49. ಯಾವುದಾದರೂ ಎರಡು ಅನ್ಯದೇಶ್ಯ ಪದಗಳನ್ನು ಬರೆಯಿರಿ.

50. ಕೆಳಗಿನ ಎರಡು ನುಡಿಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.

ಪರದೇಶಿ, ತಲೆಬಾಗು, ಸಿಂಹಸ್ವಪ್ನ

ಆ. ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧವನ್ನು ಬರೆಯಿರಿ. **1x4=4**

51. ಪುಸ್ತಕಗಳ ಮಹತ್ವ

ಅಥವಾ

ಬಾಲ್ಯದ ನೆನಪುಗಳು.

ಇ. ಇವುಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ. **1x4=4**

52. ಬೃಂದ/ ರವಿ ದ್ವಿತೀಯ ಪಿಯುಸಿ ಅಂಬೇಡ್ಕರ್ ಪದವಿ ಪೂರ್ವ ಕಾಲೇಜು, ಜೆ.ಸಿ.ನಗರ, ಬೆಂಗಳೂರು ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ, ನಿಮ್ಮ ಕಾಲೇಜಿನ ಪ್ರಾಂಶುಪಾಲರಿಗೆ ಅಂಕಪಟ್ಟಿ ಮತ್ತು ವರ್ಗಾವಣೆ ಪತ್ರವನ್ನು ಕೋರಿ ಪತ್ರ ಬರೆಯಿರಿ.

ಅಥವಾ

ರಾಜೇಶ್ / ಕಾವ್ಯ ದ್ವಿತೀಯ ಪಿಯುಸಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ರಾಜಾಜಿನಗರ, ಬೆಂಗಳೂರು. ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ, ಮೋಹನ, # 21, ಕಾರಂತ ರಸ್ತೆ, ಜಯಲಕ್ಷ್ಮಿಪುರ, ಮೈಸೂರಿನಲ್ಲಿರುವ ನಿಮ್ಮ ತಂದೆಗೆ ಪ್ರವಾಸಕ್ಕೆ ಹೋಗಲು ಹಣ ಮತ್ತು ಅನುಮತಿಯನ್ನು ನೀಡುವಂತೆ ಕೋರಿ ಪತ್ರ ಬರೆಯಿರಿ.

*****

schools.aglasem.com
AglaSem Earn while Learn Program. Send your papers and get paid.
Contact: support@aglasem.com
aglasem.com

QUESTION PAPERS

GET PREVIOUS YEAR QUESTION PAPERS FOR ALL CLASSES FOR CBSE, ISCSE, ISC AND ALL ALL STATE BOARDS HERE AT AGLASEM.COM

BOARD WISE

- Andhra Pradesh Board Question Papers
- Assam Board Question Papers
- Bihar Board Question Papers
- Chhattisgarh Board Question Papers
- Goa Board Question Papers
- Gujarat Board Question Papers
- Haryana Board Question Papers
- Himachal Pradesh Board Question Papers
- J&K State Board Question Papers
- Jharkhand Board Question Papers
- Karnataka Board Question Papers
- Kerala Board Question Papers
- Madhya Pradesh Board Question Papers
- Maharashtra State Board Question Papers
- Manipur Board Question Papers
- Meghalaya Board Question Papers
- Mizoram Board Question Papers
- Nagaland Board Question Papers
- Orissa Board Question Papers
- Punjab Board Question Papers
- Rajasthan Board Question Papers
- Tamil Nadu Board Question Papers
- Telangana State Board Question Papers
- Tripura Board Question Papers
- Uttarakhand Board Question Papers
- Uttar Pradesh (UP) Board Question Papers
- West Bengal (WB) Board Question Papers